ಸಂ:ಉನಿ/ಸಕಇಶಿ/ವಿವ.05/ಸಿಆರ್.13/2017-18

ಜಿಲ್ಲಾಧಿಕಾರಿಗಳವರ ಕಾರ್ಯಾಲಯ
ಶಿವಮೊಗ್ಗ. ದಿನಾಂಕ: 12-07-2017

# ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ "ಡಿ" ವೃಂದದ ಅಡುಗೆ ಸಹಾಯಕರ ಹುದ್ದೆ ತಾತ್ಕಾಲಿಕ ಆಯ್ಕೆ ಪಟ್ಟಿಯ ಪ್ರಕಟಣೆ

ವಿಷಯ :- ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ "ಡಿ" ವೃಂದದ ಅಡುಗೆ ಸಹಾಯಕರ ಹುದ್ದೆಯ ಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಬಗ್ಗೆ.

ಉಲ್ಲೇಖ:-
1. ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆರವರ ಆದೇಶ ಸಂ:ಸಕಇ 268 ಪಕಸೇ 2015. ದಿನಾಂಕ: 29-09-2016.
2. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ ಇವರ ಅಧಿಸೂಚನೆ ಸಂ:ಉನಿ/ಸಕಇಶಿ/ಸಿಬ್ಬಂದಿ/ಸಿಆರ್.27/2016-17. ದಿನಾಂಕ: 20-10-2016.
3. ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆರವರ ಆದೇಶ ಸಂ:ಸಕಇ 268 ಪಕಸೇ 2015(ಭಾ-1). ದಿ: 03-06-2017.
4. ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ರವರ ರಿಟ್ ಪಿಟಿಷನ್ ನಂ: 58537-58601/2016 & 28485-28549/2017(S-REG) Dt: 11-07-2017

***

ಶಿವಮೊಗ್ಗ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ "ಡಿ" ವೃಂದದ 36 ಅಡುಗೆ ಸಹಾಯಕರ ಹುದ್ದೆಗೆ ದಿನಾಂಕ: 21-06-2017 ರಂದು ಮತ್ತು 28-06-2017 ರಂದು 1:5 ಅನುಪಾತದಲ್ಲಿ ದಾಖಲಾತಿ ಪರಿಶೀಲನೆಯನ್ನು ದೇವಾಂಗ ಸಮುದಾಯ ಭವನ, ಶಿವಮೊಗ್ಗ ಇಲ್ಲಿ ನಡೆಸಿದ್ದು, ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ 1:3 ಅನುಪಾತದಲ್ಲಿ ಅಡುಗೆ ತಯಾರಿಕಾ ಪ್ರಯೋಗಿಕ ಪರೀಕ್ಷೆಯನ್ನು ದಿನಾಂಕ: 05-07-2017 ರಂದು ದೇವಾಂಗ ಸಮುದಾಯ ಭವನ, ಶಿವಮೊಗ್ಗ ಇಲ್ಲಿ ನಡೆಸಲಾಯಿತು. ಅಡುಗೆ ತಯಾರಿಕಾ ಪ್ರಾಯೋಗಿಕ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಲ್ಲಿ 1:1 ಅನುಪಾತದಲ್ಲಿ ಮೆರಿಟ್ ಆಧಾರದ ಮೇರೆಗೆ ಅಭ್ಯರ್ಥಿಗಳ ವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳಿಗೆ ಅನುಗುಣವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ "ಡಿ" ವೃಂದದ ನೇರ ನೇಮಕಾತಿ ಸಮಿತಿ, ಶಿವಮೊಗ್ಗ ರವರ ಒಪ್ಪಿಗೆ ಪ್ರಕಾರ ಉಲ್ಲೇಖ (4)ರ ಅಂತಿಮ ಆದೇಶದ ನಿಬಂಧನೆಗೊಳಪಟ್ಟು ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ ಅಭ್ಯರ್ಥಿಗಳು ದಿನಾಂಕ: 26-07-2017 ರ ಒಳಗಾಗಿ ಉಪನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ "ಡಿ" ನೌಕರರ ನೇರ ನೇಮಕಾತಿ ಸಮಿತಿ, ಶಿವಮೊಗ್ಗ ರವರ ಕಛೇರಿಗೆ ಸಲ್ಲಿಸತಕ್ಕದ್ದು.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯು ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ, ಗುಣ, ನಡತೆ ಹಾಗೂ ಸಿಂಧುತ್ವ ಪ್ರಮಾಣ ಪತ್ರ / ವಿದ್ಯಾರ್ಹತೆ / ಗ್ರಾಮೀಣ / ಕನ್ನಡ / ಪಿ.ಡಿ.ಪಿ / ಮಾಜಿ ಸೈನಿಕ ಪ್ರಮಾಣ ಪತ್ರಗಳ ನೈಜತ್ವದ ಪರಿಶೀಲನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ವೈದ್ಯಕೀಯ ಪರೀಕ್ಷೆಯಲ್ಲಿ ವೈದ್ಯಕೀಯ ಮಂಡಳಿಯವರು ನೀಡುವ ವರದಿ ಮತ್ತು ದಾಖಲಾತಿ ಪರಿಶೀಲನೆ ಸಮಯದಲ್ಲಿ ದಾಖಲೆಗಳಲ್ಲಿ ತಪ್ಪು ಕಂಡುಬಂದಲ್ಲಿ ಇವರ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.